ರಚನೆ ಮಾಡಿದ್ದಾರೆ ಅದಕ್ಕೆ. ಆ ಕಮಿಟಿಯವರು ಸಭೆ ಸೇರಿದ್ದಾರೋ ಇಲ್ಲವೋ ಅದು ನನಗೇನೂ ಗುರುತು ಇಲ್ಲ. ಅದಕ್ಕೇ ನಾನು ತಮ್ಮೆಲ್ಲರ ಸರ್ವಪಕ್ಷದ ಸಭೆ ಕರೆಸುತ್ತೇನೆ. ಅವತ್ತು ಚುನಾವಣಾ ಆಯೋಗದ ಆಯುಕ್ತರನ್ನು ಕೂಡ ಕರೆಸೋಣ. ಏನಾಗಿದೆ ಅಂತ ತಿಳಿದುಕೊಂಡು ನೋಡೋಣ. ಈಗ ನೀವು ಏನೂ ಭಯ ಪಡುವಂತಾದ್ದು ಇಲ್ಲ. ನಿಮ್ಮ ಕ್ಷೇತ್ರ ನಿಮ್ಮ ಕ್ಷೇತ್ರವಾಗಿಯೂ ಇರುತ್ತದೆ.

ಆಗಬೇಕಾದರೆ ಇವತ್ತು ಸಾಕಷ್ಟು ಅಬ್ಜೆಕ್ಷನ್ ಇದೆ, ಬೇರೆ ಇದೆ ಎಲ್ಲ ಸಾರ್ವಜನಿಕರಿಗೆ ಇವತ್ತು ಪಾರ್ಲಿಮೆಂಟ್‌ನಲ್ಲಿ, ಲೋಕಸಭೆಯಲ್ಲಿ ತಿದ್ದುಪಡಿ ಮಾಡಿ ಜನಗಣತಿ ಆಧಾರದ ಮೇಲೆ ಕ್ಷೇತ್ರಗಳ ಪುನರ್ ವಿಂಗಡಣೆಯ ಮಾತು ಏನು ಕೇಳಿ ಬರುತ್ತಿದೆ 2000 ಜನಗಣತಿ ಮೇಲೆ ಅದು ಏಕಾಏಕೀ ಮಾಡುವುದಿಲ್ಲ. ಸಾರ್ವಜನಿಕರ ಗಮನಕ್ಕೆ ತರುತ್ತಾರೆ. ತಾವು ಹೋಗಿ ಮನವಿ ಸಹ ಮಾಡಬೇಕು, ಅದಕ್ಕೆ ತಮಗೆ ಅವಕಾಶ ಇದೆ. ಬೇಕಾದರೆ ಒಂದು ಸಭೆ ಕರೆಸುತ್ತೇನೆ ಅಧ್ಯಕ್ಷರು ಮತ್ತು ಸಭಾಪತಿಯವರು.....

ಶ್ರೀ ವಾಟಾಳ್ ನಾಗರಾಜ್: ನನ್ನ ಕ್ಷೇತ್ರ ಒಂದೇ ಅಲ್ಲ ಸ್ವಾಮಿ, ತಮ್ಮ ಕ್ಷೇತ್ರವೂ.

ಶ್ರೀ ಎನ್. ಧರ್ಮಸಿಂಗ್: ನನ್ನ ಕ್ಷೇತ್ರವೂ ಬರುತ್ತದೆ. ನನ್ನ ಕ್ಷೇತ್ರ ಎನ್ನುವುದು ಸಾಕು ಈಗ 8 ಸಲ ಆಯಿತು. ಇನ್ನು ಏನೂ ಆಗುವುದಿಲ್ಲ. ಅದಕ್ಕೆ ಅದರ ಬಗ್ಗೆ ಏನೂ ಇಲ್ಲ. ಕರೆಸಿ ಮಾತನಾಡೋಣ.

ಉಪಾಧ್ಯಕ್ಷರು: ಮಾನ್ಯ ನಾರಾಯಣಸ್ವಾಮಿಯವರೇ ತಾವು ಮಾತನಾಡಿ.

ಶ್ರೀ ಎ. ನಾರಾಯಣಸ್ವಾಮಿ: ಮಾನ್ಯ ಅಧ್ಯಕ್ಷರೇ, ನನ್ನ ಕ್ಷೇತ್ರದಲ್ಲಿ ಸಮುದಾಯ ಆರೋಗ್ಯ ಕೇಂದ್ರ ಅಂತ ಇದೆ. ಆ ಕೇಂದ್ರದಲ್ಲಿ 6 ತಿಂಗಳಿನಿಂದ 40 ನವಜಾತ ಶಿಶುಗಳು ಮರಣ ಹೊಂದಿದ್ದಾರೆ. ಏನಪ್ಪ ಏಕೆ ಮಕ್ಕಳು ಮರಣ ಹೊಂದಿದ್ದಾರೆ ಎಂದು ಕೇಳಿದೆ. ನಾನು ಆಸ್ಪತ್ರೆಗೆ ಹೋದಾಗ ಅಲ್ಲಿರುವ ಲೇಬರ್ ವಾರ್ಡ್ ಭೇಟಿ ಮಾಡಿದೆ ನಾನು. ಆ ಲೇಬರ್ ವಾರ್ಡ್‌ಗೆ ಭೇಟಿ ಮಾಡಿದಾಗ ಅಲ್ಲಿ ಸ್ವಚ್ಛತೆಯನ್ನು ಕಾಣಲಿಲ್ಲ. ಆ ಬಗ್ಗೆ ನಾನು ಡಾಕ್ಟರ್ ಹತ್ತಿರ ಡಿಟೇಲ್ಸ್ ಕೇಳಿದಾಗ ಸಾರ್ ಇನ್ ಪ್ರೆಕ್ಷನ್ ಆಗುತ್ತಿದೆ, ನಮಗೆ ಸ್ವಚ್ಛ ಮಾಡುವುದಕ್ಕೆ ಅವಕಾಶ ಇಲ್ಲ. ಡಿ ಗ್ರೂಪ್ ವರ್ಕರ್ಸ್‌ನ್ನು ಅಪಾಯಿಂಟ್ ಮಾಡಿಕೊಳ್ಳಲಿಲ್ಲ. ಮತ್ತೆ ಕಂಟ್ರಾಕ್ಟ್ ಕೊಟ್ಟಿದ್ದಾರೆ. ಕಂಟ್ರಾಕ್ಟರ್‌ಗೆ ಹಣ ಕೊಡದೇ ಇರುವುದರಿಂದ ಕಂಟ್ರಾಕ್ಟರ್ ಆ ಸ್ವಚ್ಛತೆ ಕೆಲಸವನ್ನು ಮಾಡುತ್ತಿಲ್ಲ, ಆದ್ದರಿಂದ ಸರ್ಕಾರ ಈ ಬಗ್ಗೆ ಎಚ್ಚೆತ್ತು ಕೊಳ್ಳಬೇಕು, ಜಿಲ್ಲಾ ಪಂಚಾಯಿತಿ ಎಚ್ಚೆತ್ತುಕೊಳ್ಳಬೇಕು ಎಂದು ಹೇಳಿದರು. ನನಗೆ ಈ ಡಿ ಗ್ರೂಪ್ ವರ್ಕರ್ಸ್‌ನ್ನು

ಅಪಾಯಿಂಟ್‌ಮೆಂಟ್ ಮಾಡುತ್ತೀರಾ? ಕಂಟ್ರಾಕ್ಟ್‌ರ್‌ಗೆ ಪೇಮೆಂಟ್ ಮಾಡದೇ ನಿಲ್ಲಿಸಿರುವುದು ಏಕೆ? ಸರ್ಕಾರದಲ್ಲಿ ಹಣ ಇಲ್ಲವೇ ಏಕೆ? ಕಂಟ್ರಾಕ್ಟರ್ ಮೇಲೆ ಕ್ರಮ ತೆಗೆದುಕೊಳ್ಳುತ್ತೀರಾ? ಇನ್‌ಪೆಕ್ಷನ್ ಆಗಿ ಸೋಂಕು ತಗಲಿ ಮಕ್ಕಳು ಸಾಯುವ ಜವಾಬ್ದಾರಿ ಸರ್ಕಾರದ ಮೇಲಿದೆ ಆ ಜವಾಬ್ದಾರಿ ಮೇಲೆ ಸರ್ಕಾರ ಏನು ಕ್ರಮ ತೆಗೆದುಕೊಳ್ಳುತ್ತದೆ ಎನ್ನುವುದನ್ನು ನಾನು ಮಾನ್ಯ ಕಂದಾಯ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್: (ಮಾನ್ಯ ಕಂದಾಯ ಸಚಿವರು): ಮಾನ್ಯ ಅಧ್ಯಕ್ಷರೇ, ವೈದ್ಯರ ನಿರ್ಲಕ್ಷ್ಯದಿಂದ ಆಗಿದೆ ಎನ್ನುವ ವಿಚಾರವನ್ನು ತಾವು ಪ್ರಸ್ತಾಪ ಮಾಡಿದ್ದೀರಿ. ಮಾನ್ಯ ಆರೋಗ್ಯ ಸಚಿವರು ಬಂದ ತಕ್ಷಣವೇ ಈ ವಿಚಾರವನ್ನು ತಿಳಿಸಿ ಅದಕ್ಕೆ ಏನು ಸೂಕ್ತ ಕ್ರಮ ಕೈಗೊಳ್ಳಬೇಕೋ ಅದನ್ನು ಕೈಗೊಳ್ಳುತ್ತೇವೆ.

ಶ್ರೀ ಎ. ನಾರಾಯಣಸ್ವಾಮಿ: ಮಾನ್ಯ ಅಧ್ಯಕ್ಷರೇ, ಲೇಬರ್ ವಾರ್ಡ್‌ಗಳನ್ನು ಸ್ವಚ್ಛವಾಗಿ ಇಟ್ಟುಕೊಳ್ಳುವುದು ನಮ್ಮ ಜವಾಬ್ದಾರಿ. ಸೀರಿಯಸ್ ಆಗಿ ಇಡೀ ರಾಜ್ಯದಲ್ಲಿ ಈ ವ್ಯವಸ್ಥೆ ಇದೆ. ಇದು ಬರೀ ಆನೇಕಲ್ ಕ್ಷೇತ್ರದಲ್ಲಿ ಅಲ್ಲ.

ಶ್ರೀ ಕೆ. ರಘುಪತಿ ಭಟ್: ಮಾನ್ಯ ಅಧ್ಯಕ್ಷರೇ, ನಮ್ಮ ಕರಾವಳಿ ಭಾಗದಲ್ಲಿ ಮಳೆಗಾಲದಲ್ಲಿ ಪ್ರತಿ ವರ್ಷ ಪ್ರಾರಂಭವಾಗುವಂತಹ ಸಮಸ್ಯೆ ಈ ವರ್ಷವೂ ಸಹ ಬಹಳ ಉಲ್ಬಣ ರೀತಿಯಲ್ಲಿ ಇದೆ. ಸಮುದ್ರದ ಕೊರತೆ ಸಮಸ್ಯೆಯಿಂದ ನಮ್ಮ ಕರಾವಳಿ ತೀರದ ಜನತೆ ಬಹಳ ಭಯಭೀತರಾಗಿದ್ದಾರೆ. ಕಳೆದ ಬಾರಿ ನಮ್ಮ ಜಿಲ್ಲಾ ಉಸ್ತುವಾರಿ ಸಚಿವರ ನೇತೃತ್ವದಲ್ಲಿ ರಾಜ್ಯದ ಮುಖ್ಯಮಂತ್ರಿಗಳೂ ಸಭೆ ಕರೆದಂತಹ ಸಂದರ್ಭದಲ್ಲಿ ನಮ್ಮ ಜಿಲ್ಲೆಗೆ 3 ಕೋಟಿ ರೂಪಾಯಿಯನ್ನು ಸುನಾಮಿ ನಿಧಿಯಿಂದ ಕಡಲು ಕೊರತಕ್ಕೆ ಬಿಡುಗಡೆ ಮಾಡುತ್ತೇವೆ ಎನ್ನುವಂತಹ ಭರವಸೆಯನ್ನು ಕೊಟ್ಟಿದ್ದರು.ಆದರೆ ಇವತ್ತು ನಮ್ಮ ಜಿಲ್ಲೆಗೆ 1 ಕೋಟಿ ರೂಪಾಯಿ ಮಾತ್ರ ಬಿಡುಗಡೆಯಾಗಿದೆ ಎಂದು ಹೇಳುವಂತಾದ್ದು, ನಮ್ಮ ಜಿಲ್ಲೆಯ ಅಧಿಕಾರಿಗಳಿಂದ ಗೊತ್ತಾಗುತ್ತಿದೆ. ಆದ್ದರಿಂದ ಅವರು ಭರವಸೆ ಕೊಟ್ಟಂತೆ 3 ಕೋಟಿ ರೂಪಾಯಿಗಳನ್ನು ತಕ್ಷಣ ಬಿಡುಗಡೆ ಮಾಡಬೇಕು. ಇಲ್ಲಿ ಸಮಸ್ಯೆ ಏನಿದೆ ಅಂದರೆ ನನ್ನ ಉಡುಪಿ ವಿಧಾನಸಭಾ ಕ್ಷೇತ್ರದಲ್ಲಿ ಪಡುಕೆರೆ ಎನ್ನುವಂತಹ ಒಂದು ಭಾಗ ಇದೆ. ಇಲ್ಲಿ ಹೇಗಿದೆ ಅಂದರೆ ಒಂದು ಕಡೆ ಸಮುದ್ರ ಇನ್ನೊಂದು ಕಡೆ ನದಿ. ಕೇವಲ ನೂರಿನ್ನೂರು ಮೀಟರ್ ಗ್ಯಾಪ್ ಮಾತ್ರವಿದೆ. ಅಲ್ಲಿ ಸುಮಾರು 200–300 ಮನೆಗಳೂ ಇವೆ, ಸಮುದ್ರ ಕೊರೆತ ಜಾಸ್ತಿಯಾಗಿಬಿಟ್ಟರೆ ನದೀವರೆಗೆ ಬಂದು ಒಂದಾಗಿ ಬಿಟ್ಟರೆ ಆ ಭಾಗದ ಜನರಿಗೆ ತೊಂದರೆಯಾಗಲಿಕ್ಕೆ ಇದೆ. ಆದ್ದರಿಂದ ಸಮುದ್ರ ಕೊರೆತದ ಬಗ್ಗೆ ತಕ್ಷಣ ಕ್ರಮ ಕೈಗೊಳ್ಳಬೇಕು, ಮೂರು ಕೋಟಿಯಷ್ಟು ಬಿಡುಗಡೆ ಮಾಡಬೇಕು